**ಸಂಪಾದಕ ಮಂಡಳಿ**

ವೈ. ಮೋಹನ ರಾವ್
ಯು. ಅರವಿಂದ ಕುಮಾರ್
ಎಚ್.ಎನ್. ಶ್ಯಾನುಭಾಗ್
ಟಿ. ವಿಶ್ವನಾಥ ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ
ಟಿ. ಸುರೇಶ ರಾವ್
ರೂಪಾ ವಸಂತ ರಾವ್
ಕೃಷ್ಣಕುಮಾರ್ ರಾವ್, ಮಟ್ಟು
ಕೆ. ವೇಣುಗೋಪಾಲ ರಾವ್
ಯು. ಪ್ರಫುಲ್ಲಚಂದ್ರ ರಾವ್

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಲೇಖನಗಳು ಅಥವಾ ಪತ್ರಿಕೆಯ ಇತರ ಯಾವುದೇ ವಿಷಯಗಳ ಬಗ್ಗೆ ಯಾವುದೇ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

-ಸಂ.

## ಚಿಂತನ

ಶಕ್ತನಾದೊಡೆ ನೆಂಟರೆಲ್ಲ ಹಿತವರಯ್ಯಾ ।
ಅಶಕ್ತನಾದೊಡೆ ತನ್ನಾಪ್ತರೇ ವೈರಿಗಳಯ್ಯಾ ॥

ಇದು ದಾಸ ಶ್ರೇಷ್ಠರೆನಿಸಿದ ಪುರಂದರ ದಾಸರು ಹೇಳಿದ ಸತ್ಯಮಾತು. ಈ ಜಗತ್ತಿನಲ್ಲಿ ಶಕ್ತನಾಗಿದ್ದರೆ ಮಾತ್ರ ಆತನಿಗೆ ಮನ್ನಣೆ. ಉದಾಹರಣೆ ಫುಟಬಾಲ್ ಆಟಗಾರನೊಬ್ಬ ಗೋಲುಬಾರಿಸಿದಾಗ, ಕ್ರಿಕೆಟ್ ಆಟಗಾರನೊಬ್ಬ ಸಿಕ್ಸರ್ ಬಾರಿಸಿದಾಗ ಸಾವಿರಾರು ಮಂದಿ ಆತನಿಗೆ ಹ್ಯಾಟ್ಸ್ ಆಫ್ ಮಾಡುವುದು ಇದೆ ತಾನೇ? ಸಾಕಿ ಸಲಹಿದ ತನ್ನ ಮಗು ಬೆಳೆದಾಗ ದುರ್ಬಲನೂ, ದಡ್ಡನೂ, ಅಶಕ್ತನೂ ಆದರೆ ಅದೇ ಮಾತಾಪಿತರು ಯಾಕಾಗಿ ಹುಟ್ಟಿದನಪ್ಪಾ ಈತ? ಎಂದು ಮನದಲ್ಲೇ ಕರುಬುವುದಿಲ್ಲವೇ?

ಈ ಜಗತ್ತಿನಲ್ಲಿ ಮನುಷ್ಯನನ್ನು ದುರ್ಬಲಗೊಳಿಸುವ ಹಲವಾರು ಕಾರ್ಯಗಳು ಆಗಾಗ ನಡೆಯುತ್ತಾ ಬಂದಿದೆ. ಆತ ತಾನು ದುರ್ಬಲನೆಂದು ಮನದಲ್ಲಿ ತಿಳಿದುಕೊಂಡು ಅಂತಹ ವರ್ತನೆಯನ್ನು ಇತರರಿಗೆ ತೋರಿಕೆ ಮಾಡಿದ್ದಾದರೆ ಸಾರ್ವಜನಿಕವಾಗಿ ಚಿತ್ರಹಿಂಸೆಗೆ ಗುರಿಯಾಗುತ್ತಾನೆ. ಎಷ್ಟೆ ಕಷ್ಟ ಕಾರ್ಪಣ್ಯಗಳು ಎದುರಾದರೂ ಸಮಸ್ಯೆಗಳು ತಮ್ಮದಾದರೂ ಅದನ್ನು ನಿವಾರಿಸಿಕೊಳ್ಳುವ ಶಕ್ತಿ ನಮ್ಮಲ್ಲಿ ಇದ್ದೇ ಇರುತ್ತದೆ. ಪ್ರತಿಯೊಬ್ಬ ಮಾನವನ ಮನದಾಳದಲ್ಲಿರುವ ಈ ಸಾವಿಲ್ಲದ, ನೋವಿಲ್ಲದ ದೈವೀಶಕ್ತಿ ಪ್ರಚ್ಛನ್ನಸ್ಥಿತಿಗೆ ಬರಬೇಕು. ಅದನ್ನೇ ನಾವು ಸ್ಫೂರ್ತಿ, ಧೈರ್ಯ, ತಾಳ್ಮೆ, ಶಾಂತಿ ಆತ್ಮವಿಶ್ವಾಸ ಮೊದಲಾದ ರೀತಿಯಲ್ಲಿ ಸದ್ಬಳಕೆ ಮಾಡಿ ಕೊಳ್ಳುವಂತಾಗಬೇಕು. ಹೀಗೆ ಮುನ್ನುಗ್ಗಿದಾತನೇ ಸೋಲಿಲ್ಲದ ಸರದಾರನೆನಿಸುತ್ತಾನೆ. ಜಗತ್ತು ಆತನನ್ನೇ ಶಕ್ತಿವಂತ ಎಂದು ಬೊಟ್ಟಿಡುತ್ತದೆ.

ಯಾರು ಮೇಲಿನ ಐದು ಗುಣಗಳನ್ನು ತನ್ನಲ್ಲಿ ಬೆಳೆಸಿಕೊಳ್ಳುವುದಿಲ್ಲವೋ ಆತ ತನ್ನ ಜೀವನದಲ್ಲಿ ಹಿನ್ನಡೆ ಪಡೆಯುತ್ತಾನೆ. ಸಮಸ್ಯೆಗಳನ್ನು ಎದುರಿಸುವಲ್ಲಿ ವಿಫಲನಾಗುತ್ತಾನೆ. ಆತನನ್ನು ಸಮಾಜವು ಶಕ್ತಿಹೀನ ಎಂದು ದೂಷಿಸುತ್ತದೆ.

ಮನುಷ್ಯರಾದ ನಮಗೆ ದೇವರು ಸಕಲ ಸೌಭಾಗ್ಯದ ಜೊತೆಗೆ ದಿಟ್ಟ ಮನವನ್ನೂ ಯೋಚನಾ ಸಾಮರ್ಥ್ಯವನ್ನೂ ಕರುಣಿಸಿದ್ದಾನೆ. ಅದನ್ನು ಸದ್ಬಳಕೆ ಮಾಡಿಕೊಂಡು ನಮ್ಮ ಯಾವುದೇ ಸಮಸ್ಯೆಗಳನ್ನು ಪರಿಹರಿಸಿ ಕೊಳ್ಳುವಂತಹ ಶಕ್ತಿವಂತ ನಾವಾಗಬೇಕು.

ಆದ್ದರಿಂದ ಶಕ್ತಿಯೇ ಜೀವನ ; ದುರ್ಬಲತೆಯೇ ಮರಣ, ಎಂಬ ಮಾತನ್ನು ಸದಾ ನೆನಪಿಟ್ಟು ಕೊಂಡು ಜೀವನದಲ್ಲಿ ಶಕ್ತಿವಂತರಾಗಲು ಪ್ರಯತ್ನಿಸೋಣ.

# ಶ್ರಾದ್ಧದರ್ಶನ

-ಆತ್ಮಾರಾಮ ಶಾಸ್ತ್ರಿ ಬೆಂಗಳೂರು.

“ಮಾತೃದೇವೋಭವ, ಪಿತೃದೇವೋಭವ” ಎಂಬಂತಹ ಉದಾತ್ತ ಸಂಸ್ಕೃತಿ ಭಾರತದಲ್ಲಲ್ಲದೇ ಬೇರೆ ದೇಶಗಳಲ್ಲಿ ಕಾಣಲು ಸಿಕ್ಕೀತೇ? ತಾಯಿ-ತಂದೆಯವರಿಗೆ ತೋರುವ ಈ ಉನ್ನತ ಗೌರವ ಅವರ ಜೀವಿತೋತ್ತರದಲ್ಲೂ ಮುಂದುವರಿಯುತ್ತದೆ. ಈ ಅನನ್ಯ ಶ್ರದ್ಧೆಯೇ ಶ್ರಾದ್ಧದ ಮೂಲದ್ರವ್ಯ. ಆದುದರಿಂದಲೇ ಶ್ರಾದ್ಧಕ್ಕೆ ಅತಿ ಮಹತ್ವ ಬಂದಿರುವುದು. ಇದನ್ನೇ ತೈತಿರಿಯೋಪನಿಷತ್ತು ಹೇಳುವುದು-

ದೇವಪಿತೃಕಾರ್ಯಾಭ್ಯಾಂ ನ ಪ್ರಮದಿತವ್ಯಮ್ ಎಂದು. ದೇವತಾರಾಧನೆ ಮತ್ತು ಪಿತ್ರಾರಾಧನೆ ಅವಶ್ಯಕರ್ತವ್ಯವಾಗಿರುವುದರಿಂದ ಅವುಗಳ ಬಗೆಗೆ ಸರ್ವಥಾ ಅಸಡ್ಡೆ, ಪ್ರಮಾದ ಸಲ್ಲದೆಂದು ಅದರ ತಾತ್ಪರ್ಯ.

ಶ್ರದ್ಧೆಯಿಂದ ಮಾಡಿದ್ದೇ ಶ್ರಾದ್ಧ. ಆದರೆ ಶ್ರದ್ಧೆಯಿಂದ ಮಾಡಿದ್ದೆಲ್ಲ ಶ್ರಾದ್ಧವಾಗುವುದಿಲ್ಲ. ಶ್ರದ್ಧೆಯೇ ಪ್ರಧಾನವಾಗಿರುವ ಪಿತೃಕಾರ್ಯಕ್ಕೆ ಮಾತ್ರ ಶ್ರಾದ್ಧವೆಂಬ ಪದ ರೂಢವಾಗಿದೆ. ಪಿತೃಗಳಿಗೆ ತೋರುವ ಈ ಶ್ರದ್ಧೆ, ಕೃತಜ್ಞತೆ ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯಗಳಲ್ಲೊಂದು. ಕುಟುಂಬ, ಕುಲಗಳ ಕಲ್ಪನೆಯೇ ಇಲ್ಲದ ಪಾಶ್ಚಾತ್ಯ ಸಂಸ್ಕೃತಿಗೆ ಇದು ಅರ್ಥವಾಗದ ಸಂಗತಿ. ಈ ದಿಕ್ಕು ದೆಸೆಯಿಲ್ಲದ ಪಾಶ್ಚಾತ್ಯ ಸಂಸ್ಕೃತಿಯ ದಾಸರಾಗುತ್ತಿರುವ ಭಾರತೀಯರು ಬೇರು ಕಳೆದುಕೊಂಡು ಭಾರತದ ಸಂಸ್ಕೃತಿಗೆ ಭಾರವಾಗುತ್ತಿದ್ದಾರೆ. ಅಥವಾ ಭಾರತೀಯ ಸಂಸ್ಕೃತಿಯೇ ಅವರಿಗೆ ಭಾರವಾಗುತ್ತಿದೆ! ಮುಂದೊಂದು ದಿನ ಭಾರತದಲ್ಲೇ ಅವರು ಅನಾಥರಾಗುವುದು ಖಂಡಿತ.

ನಮ್ಮ ವ್ಯಕ್ತಿತ್ವ ಮೂರು ಘಟಕಗಳಿಂದೊಡಗೂಡಿದೆ. ಅದೇ ಸ್ಥೂಲ ಶರೀರ, ಸೂಕ್ಷ್ಮ ಶರೀರ ಮತ್ತು ಕಾರಣ ಶರೀರ. ಸ್ಥೂಲಶರೀರಕ್ಕೆ ತಂದೆ ಕಾರಣವಾದರೆ, ಸೂಕ್ಷ್ಮ ಶರೀರಕ್ಕೆ ಅಜ್ಜ ಕಾರಣ. ಹಾಗೆಯೇ ಕಾರಣ ಶರೀರಕ್ಕೆ ಮುತ್ತಜ್ಜ ಕಾರಣ. ಸ್ಥೂಲಶರೀರಕ್ಕೆ ಸೂಕ್ಷ್ಮ ಶರೀರ ಕಾರಣವಾದಂತೆ ಸೂಕ್ಷ್ಮ ಶರೀರಕ್ಕೆ ಕಾರಣ ಶರೀರ ಕಾರಣವಾಗುತ್ತದೆ.

ಈ ಸ್ಥೂಲ ಜಗತ್ತು ಅಗ್ನಿ, ಭೂಮಿ, ವಾಯು, ಅಂತರಿಕ್ಷ, ಆದಿತ್ಯ, ದ್ಯುಲೋಕ, ಚಂದ್ರ, ನಕ್ಷತ್ರ ಎಂಬ ಎಂಟು ವಸುಗಳಿಂದುಂಟಾಗಿದೆ. ಎಂದರೆ ನಮ್ಮ ಸ್ಥೂಲಶರೀರದ ನಿರ್ಮಾಣ ಈ ಎಂಟು ವಸುಗಳಿಂದಾಗಿದೆ ಎಂದರ್ಥ ತಾನೇ? ಈ ಕಾರಣಕ್ಕಾಗಿಯೇ ತಂದೆಯನ್ನು ವಸುರೂಪನೆನ್ನುವುದು.

ಐದು ಕರ್ಮೇಂದ್ರಿಯಗಳು, ಐದು ಜ್ಞಾನೇಂದ್ರಿಯಗಳು ಮತ್ತು ಮನಸ್ಸು - ಇವುಗಳು ಸೂಕ್ಷ್ಮ ದೇಹಕ್ಕೆ ಕಾರಣ. ಈ ಹನ್ನೊಂದು ತತ್ತ್ವಗಳನ್ನು ರುದ್ರರೆಂದು ಹೇಳುತ್ತಾರೆ. ಸೂಕ್ಷ್ಮ ಶರೀರಕ್ಕೆ ಕಾರಣನಾದ ಪಿತಾಮಹ (ಅಜ್ಜ) ರುದ್ರರೂಪ.

ವರ್ಷದ ಹನ್ನೆರಡು ತಿಂಗಳುಗಳು ಆದಿತ್ಯಪದ ವಾಚ್ಯಗಳಾಗಿವೆ. ಜೀವಿಗಳ ಕರ್ಮಫಲಗಳನ್ನು ತೆಗೆದುಕೊಂಡು ಹೋಗುವುದರಿಂದ (ಆದದಾನಾಯಂತಿ ಇತಿ ಆದಿತ್ಯಾಃ) ಅವುಗಳನ್ನು ಆದಿತ್ಯರೆಂದು ಕರೆಯುತ್ತಾರೆ. ಕಾರಣ ಶರೀರಕ್ಕೆ ಕಾರಣನಾದ ಪ್ರಪಿತಾಮಹ (ಮುತ್ತಜ್ಜ)ನೇ ಆದಿತ್ಯರೂಪ.

ವಸು-ರುದ್ರ-ಆದಿತ್ಯರಿಗೆ ಅಧಿಷ್ಠಾತೃ ದೇವತೆಗಳೆಂದರೆ ಬ್ರಹ್ಮ-ಮಹೇಶ್ವರ-ವಿಷ್ಣುಗಳೆಂಬ ತ್ರಿಮೂರ್ತಿಗಳೇ. ಆದುದರಿಂದ ಶ್ರಾದ್ಧದಲ್ಲಿ ಪಿತೃಗಳ ಆರಾಧನೆಯಿಂದ ತ್ರಿಮೂರ್ತಿಗಳೂ ಸಂತುಷ್ಟರಾಗುತ್ತಾರೆ. ಹೀಗೇ ಶ್ರಾದ್ಧದಲ್ಲಿ ತಂದೆ-ಅಜ್ಜ-ಮುತ್ತಜ್ಜರ ಹೆಸರುಗಳನ್ನು ಮಾತ್ರ ಹೇಳದೆ ವಸು-ರುದ್ರ-ಆದಿತ್ಯರನ್ನೂ ಅವರೊಂದಿಗೆ ಸೇರಿಸಿ ಹೇಳುವುದು ಕ್ರಮವಾಗಿದೆ.

ಪಿತೃಗಳೆಲ್ಲ ಒಂದೇ ಅಲ್ಲ. ಅವರಲ್ಲಿ ಅನೇಕ ವರ್ಗಗಳಿವೆ. ಅಗ್ನಿಷ್ವಾಕ್ತರು, ಬರ್ಹಿಷದರು, ಸೋಮಪರು, ಆಜ್ಯಪರು, ಕಾವ್ಯರು, ಹವಿಷ್ಮಂತರು, ಸಾಗ್ನಿಗಳು, ನಿರಗ್ನಿಗಳು ಇತ್ಯಾದಿ. ಇವರಿಗೆ ದಕ್ಷ ಬ್ರಹ್ಮನ ಮಗಳಾದ ಸ್ವಧೆಯೇ ಪತ್ನಿ. ಬ್ರಾಹ್ಮಣರ ಶ್ರಾದ್ಧದಲ್ಲಿ ಬರುವ ಪಿತೃದೇವತೆಗಳು ಸೋಮಪರು ಮತ್ತು ಅಗ್ನಿಷ್ವಾಕ್ತರು. ಕ್ಷತ್ರಿಯರಿಗೆ ಬರ್ಹಿಷದರು, ವೈಶ್ಯರಿಗೆ ಕಾವ್ಯರು, ಶೂದ್ರರಿಗೆ ಸುಕಾಲಿಗಳು, ಮ್ಲೇಚ್ಛ ಮೊದಲಾದವರಿಗೆ ವ್ಯಾಮರು.

ಪಿತೃಗಳ ಅಧಿಷ್ಠಾತೃ ದೇವತೆಗಳೆಂದರೆ ವಿಶ್ವೇದೇವರೆಂಬವರು. ಇವರ ತಾಯಿ ಪ್ರಾಚೇತಸದಕ್ಷಬ್ರಹ್ಮನ ಮಗಳಾದ ವಿಶ್ವಾ ಎಂಬವಳು. ಇವರ ತಂದೆ ಬ್ರಹ್ಮನ ಮಾನಸ ಪುತ್ರನಾದ ಧರ್ಮ. ಈ ವಿಶ್ವೇದೇವತೆಗಳು ಹದಿಮೂರು ಮಂದಿ :- 1) ಸತ್ಯ 2) ವಸು 3) ಪುರೂರವ 4) ಆರ್ದ್ರವ 5) ಧೂರಿ (ಧುರಿ ಎಂದೂ ಹೇಳುವುದಿದೆ) 6) ಲೋಚನ 7) ಕಾಮ 8) ಕಾಲ 9) ಕ್ರತು 10) ದಕ್ಷ 11) ಧನು 12) ರುಚಿ 13) ರುದ್ರ. ವಿಶ್ವೇದೇವರು ಬ್ರಹ್ಮನ ವರದಿಂದ ಶ್ರಾದ್ಧಭಾಗಿಗಳಾಗಿದ್ದಾರೆ. ಇವರು ಇಬ್ಬರಿಬ್ಬರು ಶ್ರಾದ್ಧಗಳಲ್ಲಿ ಭಾಗವಹಿಸುತ್ತಾರೆ.

ಶ್ರಾದ್ಧಗಳು ಅನೇಕ ಬಗೆ. ವಿಶ್ವಾಮಿತ್ರ ಸ್ಮೃತಿಯಲ್ಲಿ ಹನ್ನೆರಡು ಶ್ರಾದ್ಧಗಳನ್ನು ಹೇಳಲಾಗಿದೆ. ನಿತ್ಯ, ನೈಮಿತ್ತಿಕ, ಕಾಮ್ಯ, ವೃದ್ಧಿ, ಸಪಿಂಡೀಕರಣ, ಪಾರ್ವಣ, ಗೋಷ್ಠಿ, ಶುದ್ಧಿ, ಕರ್ಮಾಂಗ, ದೈವಿಕ, ಯಾತ್ರಾ, ಪುಷ್ಟಿಗಳೆಂಬವುಗಳೇ ಅವು-ಸಾಮಾನ್ಯವಾಗಿ 96 ಶ್ರಾದ್ಧಗಳಿವೆ. ಅವುಗಳನ್ನು ಹೀಗೆ ಲೆಕ್ಕ ಹಾಕುತ್ತಾರೆ.

| | | |
|---|---|---|
| 1) | ಅಮಾವಾಸ್ಯಾ ಶ್ರಾದ್ಧಗಳು | -೧೨ |
| 2) | ಸಂಕ್ರಮಣ ಶ್ರಾದ್ಧಗಳು | -೧೨ |
| 3) | ಯುಗಾದಿ ಶ್ರಾದ್ಧಗಳು | -೪ |
| 4) | ವೈಧೃತಿ ಶ್ರಾದ್ಧಗಳು | -೧೩ |
| 5) | ವ್ಯತೀಪಾತ ಶ್ರಾದ್ಧಗಳು | -೧೩ |
| 6) | ಮಹಾಲಯ ಶ್ರಾದ್ಧಗಳು | -೧೬ |
| 7) | ಅಷ್ಟಕಾ ಶ್ರಾದ್ಧದ ಪೂರ್ವ ದಿನದ ಶ್ರಾದ್ಧಗಳು | -೪ |
| 8) | ಅಷ್ಟಕಾ ಶ್ರಾದ್ಧಗಳು | -೪ |
| 9) | ಅನ್ವಷ್ಟಕ ಶ್ರಾದ್ಧಗಳು | -೪ |
| 10) | ಮನ್ವಾದಿ ಶ್ರಾದ್ಧಗಳು | -೧೪ |
| | **ಒಟ್ಟು** | ೯೬ |

ಶ್ರಾದ್ಧಗಳಲ್ಲಿ ಪಾರ್ವಣ ಶ್ರಾದ್ಧವೇ ಶ್ರೇಷ್ಠ. ಪಾರ್ವಣವೆಂದರೆ ತಂದೆ-ಅಜ್ಜ-ಮುತ್ತಜ್ಜಂದಿರಿಗೆ ಪಿಂಡ ಪ್ರದಾನ ಮಾಡಿ ಮಾಡುವ ಶ್ರಾದ್ಧ. ಪಾರ್ವಣದಲ್ಲಿ ಪಿತೃಗಳನ್ನು ಕರೆದುಕೊಂಡು ಬರುವ ವಿಶ್ವೇದೇವರು ಪುರೂರವ ಆರ್ದ್ರವ ಎಂಬವರು. ತೀರ್ಥಶ್ರಾದ್ಧದಲ್ಲಿ ಮತ್ತು ಮಹಾಲಯದಲ್ಲಿ ಧುರಿ-ಲೋಚನರು. ಸಪಿಂಡೀಕರಣದಲ್ಲಿ ಕಾಮ-ಕಾಲರು. ಕಾಮ್ಯದಲ್ಲಿ ಕ್ರತು-ದಕ್ಷರು. ಹಿರಣ್ಯ ಶ್ರಾದ್ಧದಲ್ಲಿ ಧನು-ರುಚಿಯರು. ಸತ್ಯ-ವಸುಗಳು ನಾಂದೀ ಶ್ರಾದ್ಧಕ್ಕೆ. ಏಕೋದ್ದಿಷ್ಟದಲ್ಲಿ ರುದ್ರನೆಂಬ ಒಬ್ಬನೇ ವಿಶ್ವೇದೇವ. ವಿಶ್ವೇದೇವರು ಪಿತೃಗಳ ರಕ್ಷಕರು.

(6ನೇ ಪುಟಕ್ಕೆ ...)

## ಹೊಸ ಬೆಳಕು

**ನಲ್ನುಡಿ :**

**ಸ್ಥಾನೇ ಹೃಷಿಕೇಶ ತವ ಪ್ರಕೀರ್ತ್ಯಾ**
**ಜಗತ್ಪ್ರ ಹೃಷ್ಯತ್ಯನುರಜ್ಯತೇ ಚ ।**
**ರಕ್ಷಾಂಸಿ ಭೀತಾನಿ ದಿಶೋ ದ್ರವಂತಿ**
**ಸರ್ವೇ ನಮಸ್ಯಂತಿ ಚ ಸಿದ್ಧಸಂಘಾಃ ॥**

ಅಂದರೆ, ಕೃಷ್ಣ, ನಿನ್ನ ಗುಣ ವಿಶೇಷತೆಯಿಂದ ಜಗತ್ತೆಲ್ಲ ಹರ್ಷ ಹೊಂದುತ್ತದೆ; ಮತ್ತು ನಿನ್ನ ಮೇಲೆ ಬಹಳ ಪ್ರೀತಿಯನ್ನು ತೋರಿಸುತ್ತದೆ. ರಾಕ್ಷಸರೆಲ್ಲ ಭಯಭೀತರಾಗಿ ದಿಕ್ಕುದಿಕ್ಕಿಗೂ ಓಡಿಹೋಗುತ್ತಿದ್ದಾರೆ.

**ಪುಸ್ತಕ ಪರಿಚಯ :**

**ತುಳುನಾಡಿನ ಇತಿಹಾಸದಲ್ಲಿ ಸ್ಥಾನಿಕರು (ದೇವಸ್ಥಾನದ ಆಡಳಿತೆಯ ಐತಿಹಾಸಿಕ ಅಧ್ಯಯನ)**

**ಲೇಖಕರು : ಪಾದೂರು ಗುರುರಾಜ ಭಟ್**

ಶ್ರೀ ಸುಬ್ರಹ್ಮಣ್ಯ ಸಭಾ (ರಿ), ಮಂಗಳೂರು ಇದರ ಶತಮಾನೋತ್ಸವದ ಸಂದರ್ಭದಲ್ಲಿ ‘ತುಳುನಾಡಿನ ಇತಿಹಾಸದಲ್ಲಿ ಸ್ಥಾನಿಕರು’ ಎಂಬ ಈ ಪುಸ್ತಕದ ಎರಡನೇ ಆವೃತ್ತಿ ಮರುಮುದ್ರಣಗೊಂಡು ಬಿಡುಗಡೆಯಾಗಿದೆ. ಈ ಪುಸ್ತಕದ ಕೃತಿಸ್ವಾಮ್ಯ ಹೊಂದಿದ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಉಡುಪಿ (ರಿ.), ಇವರು ಪುನರ್ ಮುದ್ರಿಸಲು ಅನುಮತಿ ನೀಡಿದ್ದಾರೆ. ಪ್ರಥಮ ಆವೃತ್ತಿಯನ್ನು ಫಲಿಮಾರು ಮಠದ ಅಂದಿನ ಮಠಾಧೀಶರಾದ ಶ್ರೀ ರಘುವಲ್ಲಭ ತೀರ್ಥ ಶ್ರೀಪಾದಂಗಳವರು ಹರಸಿದ್ದಾರೆ. ಎಂ.ಜಿ.ಎಂ. ಕಾಲೇಜಿನ ಅಂದಿನ ಪ್ರಿನ್ಸಿಪಾಲರಾದ ಕು.ಶಿ. ಹರಿದಾಸ ಭಟ್ಟರ ಮುನ್ನುಡಿ ಮತ್ತು ಈ ಪುಸ್ತಕದ ಲೇಖಕರಾದ ಪಾದೂರು ಗುರುರಾಜ ಭಟ್ಟರ ಮೊದಲ ಮಾತು ಯಥಾವತ್ತಾಗಿ ಇಲ್ಲಿ ಮುದ್ರಿಸಲಾಗಿದೆ. ಪ್ರೊ। ಪಿ. ಗುರುರಾಜ ಭಟ್ಟರು ತುಳುನಾಡಿನ ದೇವಸ್ಥಾನಗಳ ಆಡಳಿತೆಯ ವ್ಯವಸ್ಥೆಯ ಕುರಿತು ಮಾಡಿರುವ ಆಳವಾದ ಸಂಶೋಧನಾತ್ಮಕ, ಐತಿಹಾಸಿಕ ಅಧ್ಯಯನ ಇದಾಗಿದೆ. ದೇವಸ್ಥಾನಗಳ ಆಡಳಿತೆಯಲ್ಲಿ ಪ್ರಮುಖ ಸ್ಥಾನ ಪಡೆದಿದ್ದ ಸ್ಥಾನಿಕ ಬ್ರಾಹ್ಮಣರ ಸ್ಥಾನಮಾನಗಳ ಮತ್ತು ಆಚಾರ-ವಿಚಾರಗಳ ಕುರಿತು ಮಹತ್ವಪೂರ್ಣ ಸಂಗತಿಗಳ ಬಗ್ಗೆಯೂ ಬೆಳಕು ಚೆಲ್ಲುವ ಪ್ರಯತ್ನ ಇಲ್ಲಿ ಇದೆ. ಬಳಪ ದುರ್ಗಾಪರಮೇಶ್ವರಿ ದೇವಳ, ಕಡಬದ ಶ್ರೀಕಂಠ ಸ್ವಾಮಿ ದೇವಳ, ನಾಲೂರು ಶಂಕರನಾರಾಯಣ ದೇವಾಲಯ, ಹೊಸಮಠದಲ್ಲಿರುವ ರಾಜರಾಜೇಶ್ವರಿಯ ವಿಗ್ರಹ - ಸಂಬಂಧಿಸಿ ಸುಮಾರು 28 ಯೋಗ್ಯ ಛಾಯಾಚಿತ್ರಗಳನ್ನೂ ಅಳವಡಿಸಿಕೊಳ್ಳಲಾಗಿದೆ.

ಪಾದೂರು ಗುರುರಾಜ ಭಟ್ ಅವರು ಪುಸ್ತಕದ ಮುನ್ನುಡಿಯಲ್ಲಿ ಹೇಳಿದಂತೆ - “1963ನೇ ಇಸವಿಯಲ್ಲಿ ಪ್ರಕಟವಾದ ನನ್ನ ತುಳುನಾಡು ಪುಸ್ತಕದಲ್ಲಿ ಸ್ಥಾನಿಕರ ವಿಮರ್ಷೆಯನ್ನು ಮಾಡಿದ್ದೆ. ಆ ವಿಮರ್ಷೆಯನ್ನೇ ಮುಂದುವರಿಸಿ ಮೂಲಾಧಾರಗಳನ್ನು ಸಾಧ್ಯವಿದ್ದಷ್ಟು, ದೊರಕಿದಷ್ಟು ಕೂಲಂಕುಶವಾಗಿ ಪುನಃ ಪರಿಶೀಲಿಸಿ ನಿಷ್ಪಕ್ಷಪಾತವಾಗಿ ನನ್ನ ವಿಚಾರಕ್ಕೆ ನಿಲುಕಿದಂತೆ ನನ್ನದೇ ಆದ ತೀರ್ಮಾನವನ್ನು ಬರೆದಿದ್ದೇನೆ. ತುಳುನಾಡಿನಲ್ಲಿ ಸ್ಥಾನಿಕನೆಂಬವನು ದೇವಸ್ಥಾನದ ಮುಖ್ಯಾಧಿಕಾರಿಯಾಗಿದ್ದನು. ಆತನು ಶಿವಬ್ರಾಹ್ಮಣನು. ಪಂಚಾಯತನವನ್ನು ಅವಲಂಬಿಸುವವನು ಮತ್ತು ಗೌರವಾನ್ವಿತನು.”

ಈ ಪುಸ್ತಕದಲ್ಲಿ ಮೂರು ಭಾಗಗಳಿವೆ.

ಮೊದಲ ಭಾಗವು ಸ್ಥಾನಿಕ ಪದದ ವ್ಯುತ್ಪತ್ತಿ, ಸ್ಥಾನಿಕನ-ಸ್ಥಾನಮಾನಗಳು, ಆತನ ಕರ್ತವ್ಯಗಳನ್ನು ಹಾಗೂ ದೇವಸ್ಥಾನದ ಸೇವಕ ವರ್ಗದ ಪರಿಚಯವನ್ನು ಮಾಡಲಾಗಿದೆ. ಎರಡನೆ ಭಾಗದಲ್ಲಿ ಸ್ಥಾನಿಕರ ಮತದ ಕುರಿತಾಗಿ ಬರೆಯಲಾಗಿದೆ. ಮೂರನೇ ಭಾಗದಲ್ಲಿ ಸ್ಥಾನಿಕರ ಆಡಳಿತೆಯಲ್ಲಿ ಈಗ ಇರುವ ಹಲವು ದೇವಸ್ಥಾನಗಳಲ್ಲಿ ಮೂರರ ವೈಲಕ್ಷಣ್ಯಗಳನ್ನು, ಶಿಲ್ಪ ಮತ್ತು ವಾಸ್ತು ಶಾಸ್ತ್ರ - ಇವುಗಳ ವೈಶಿಷ್ಟ್ಯಗಳನ್ನು ನಮೂದಿಸಿ ಕಾಲನಿರ್ಣಯವನ್ನು ಮಾಡಲಾಗಿದೆ.

ಈ ಪುಸ್ತಕವನ್ನು ರಾಜೇಶ ಪವರ್ ಪ್ರೆಸ್, ದರ್ಬೆ-ಪುತ್ತೂರು ಇವರು ಅಂದವಾಗಿ ಮುದ್ರಿಸಿದ್ದಾರೆ.

**- ವೈ. ಮೋಹನರಾವ್**

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ